


ಹುಟ್ಟಿ ಬೆಳೆದ ಪರಿಸರ ದಟ್ಟ ಕಾಡು ಮತ್ತು ಕಾಫಿ ತೋಟಗಳಿಂದ ಆವೃತವಾದ ಪ್ರದೇಶ. ನನಗಿಂತಲೂ ಸ್ವಲ್ಪ ಹಿರಿಯಳಾದ ಅತ್ತೆಯ ಮಗಳು ಪುತ್ತುಮೋಳು ಜೊತೆಯಲ್ಲಿ ಕಾಡು ಅಲೆದು ಗಾಳಿಗೆ ಬಿದ್ದ ಕಾಡು ಮಾವಿನಕಾಯಿ ಹೆಕ್ಕುವಾಗ, ಬೃಹದಾಕಾರವಾಗಿ ಬೆಳೆದ ಮರದಲ್ಲಿ ಭೂತ ಪ್ರೇತಗಳಿವೆ ಎಂದೂ, ಕಲ್ಲು ಝರಿಗಳ ಮಧ್ಯೆ ನೀರಿನ ತೀವ್ರತೆಗೆ ಗುಂಡಿಯಾಗಿರುವ ಭಾಗದಲ್ಲಿ ನಿಧಿ ಇದೆಯೆಂದೂ, ಅದನ್ನು ಕಾಪಾಡಲು ಹಾವು ಮತ್ತು ರಾಕ್ಷಸನೊಬ್ಬ ಕಾವಲಿಗಿದ್ದಾನೆಂದು ಆಕೆ ನನ್ನಲ್ಲಿ ನಂಬಿಸಿ ತೀವ್ರಗತಿಯ ಭಯವನ್ನು ಬಿತ್ತುವಂತೆ ಮಾಡುತ್ತಿದ್ದಳು. ಶಿವರಾತ್ರಿಯ ದಿನ ವೇಷ ಹಾಕಿಕೊಂಡು ಕುಣಿಯುವ ವೇಷಧಾರಿಗಳನ್ನು ತೋರಿಸಿ 'ಮಕ್ಕಳನ್ನು ಹೊತ್ತುಕೊಂಡು ಹೋಗುವವರು' ಎಂಬ ನಿರೂಪಣೆಗಳನ್ನು ಕಟ್ಟುತ್ತಲೇ ನನ್ನ ಭಾವಕೋಶದ ತುಂಬಾ ಪುಕ್ಕಲುತನವನ್ನೇ ತುಂಬಿಕೊಳ್ಳುವಂತೆ ಮಾಡಿದ್ದಳು.